**<u>ಸಾಕ್ಷಿಯನ್ನು ದಿನಾಂಕಃ 22-02-2023 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ಶ್ರೀ.ಕೆ.ಎಸ್.ಎನ್.ಜಿ. ವಕೀಲರವರಿಂದಃ</u>**

ಈ ದಾವೆಯನ್ನು ನನ್ನ ತಮ್ಮ ಸಿದ್ದಲಿಂಗಪ್ಪನ ವಿರುದ್ದ ಸಲ್ಲಿಸಿರುತ್ತೇನೆ. ಹೊಲ ಬಿಟ್ಟುಕೊಡಲು ಕೋರಿ ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ತಂದೆಗೆ ನಾನು ಅಜ್ಜಪ್ಪ, ಗಂಗಪ್ಪ, ಸಿದ್ದಲಿಂಗಪ್ಪ ನಾಲ್ಕು ಜನ ಗಂಡು ಮಕ್ಕಳು, ಬಸಲಿಂಗಮ್ಮ, ಗೌರಮ್ಮ ಮತ್ತು ಗಂಗಮ್ಮ ಎನ್ನುವ ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ. ನಾವು ಎಲ್ಲಾರುಾ ಸೇರಿ ನಮ್ಮ ಅವಿಭಕ್ತಕುಟುಬಂದ ಆಸ್ತಿಯನ್ನು ದಿಃ 07-04-1989 ರಲ್ಲಿ ಪಾಲುವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಪಾಲುವಿಭಾಗದಲ್ಲಿ ನಾನು ಮತ್ತು ಪ್ರತಿವಾದಿ ಸಿದ್ದಲಿಂಗಪ್ಪ ಸೇರಿ ದಾವಾ ಆಸ್ತಿ ಮತ್ತು ಎರಡು ಮನೆ ಜಂಟಿಯಾಗಿ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಜಂಟಿಯಾಗಿ ಹಿಸ್ಸೆ ತೆಗೆದುಕೊಂಡಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯೊಂದಿಗೆ ಹೊಂದಾಣಿಕೆ ಬರದಿದ್ದರಿಂದ ದಿಃ 22-02-2001 ರಂದು ನಾನು ಮತ್ತು ಪ್ರತಿವಾದಿ ಪಾಲುವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ನೊಂದಾಯಿತವಲ್ಲದ ಪಾಲುವಿಭಾಗವನ್ನು ತೋರಿಸಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಲು ಕೇಳಿರುತ್ತಾರೆ. ಸಾಕ್ಷಿಯ ಸದರಿ ಸಹಿಯನ್ನು ತನ್ನ ಸಹಿ ಅಲ್ಲ ಎಂದು ನಿರಾಕರಿಸಿರುತ್ತಾರೆ. ವಾದಿಪತ್ರದಲ್ಲಿರುವ ಸಹಿಗಳು ನನ್ನವೇ ಇರುತ್ತವೆ. ಸಾಕ್ಷಿಗೆ ಪಾಲುವಿಭಾಗಪತ್ರ ಮತ್ತು ವಾದಪತ್ರದಲ್ಲಿರುವ ಎರಡು ದಾಖಲೆಗಳಲ್ಲಿರುವ ಸಹಿಗಳನ್ನು ಒಟ್ಟಾಗಿ ತೋರಿಸಲಾಗಿ ವಾದಪತ್ರದಲ್ಲಿರುವ ಸಹಿಗಳನುನ ಒಪ್ಪಿಕೊಂಡು ಪಾಲುವಿಬಾಗದಲ್ಲಿ ನಿರಾಕರಿಸಿರುತ್ತಾರೆ. ವಾದಪತ್ರದಲ್ಲಿರುವ ಎಲ್ಲಾ ಸಹಿಗಳ ಪೈಕಿ ಕೆಲವು ನನ್ನವು ಇರುತ್ತವೆ, ಎನ್ನು ಕೆಲವು ನನ್ನವು ಇರುವುದಿಲ್ಲ ಎಂದು ನುಡಿಯುತ್ತಾರೆ. 2001 ರ ಪಾಲುವಿಬಾಗದ ಪ್ರಕಾರ 1 ಎಕರೆ 96 ಸೆಂಟ್ಸ್ ಪ್ರತಿವಾದಿ ಹಿಸ್ಸೆಗೆ ಹೋಗಿರುತತದೆ ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗದ ಪ್ರಕಾರ ನನ್ನ ಹಿಸ್ಸೆಗೆ ಎಡರು ಮನೆ ಬಂದಿರುತ್ತದೆ ಎಂದರೆ ಸರಿಯಲ್ಲ. ಪಾಲುವಿಭಾಗದ ಪ್ರಕಾರ ಪ್ರತಿವಾದಿಯು ದಾವಾ ಆಸ್ತಿಯ ಸ್ವಾದಿನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಾಲುವಿಬಾಗದ ಪ್ರಕಾರ ಕಂದಾಯ ಇಲಾಖೆಯವರಿಗೆ ನಾನೇ ಮಾಹಿತಿ ಕೊಟ್ಟು ಪಾಲುವಿಭಾಗ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಪಾಲುವಿಬಾಗದ ಪ್ರಕಾರ 2001 ರಲ್ಲಿ ಮ್ಯುಟೇಶನ್ ಆಗಿರುತ್ತದೆ ಎಂದರೆ ಸಾಕ್ಷಿಯು ಮ್ಯುಟೇಶನ್ ಆಗಿದೆ ಆದರೆ ನನಗೆ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮ್ಯುಟೇಶನ್ ಆಧಾರ ಮೇಲೆ ಪ್ರತಿವಾದಿಯ ಹೆಸರಿನಲ್ಲಿ ಪ್ರತ್ಯೇಕ ಮ್ಯುಟೇಶನ್ ಇರುತ್ತದೆ ಎಂದರೆ ಸರಿ. ಸದರಿ ಪಹಣಿಯಲ್ಲಿ

ಪ್ರತಿವಾದಿ ಹೆಸರು ದಾಖಲಾದ ನಂತರ ಸದರಿ ದಾಖಲಾತಿ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ, ಆದರೆ ಪಿರ್ಯಾದಿ ಸಲ್ಲಿಸಿದ್ದೆನು.

ಒಪ್ಪಿಗೆ ಪತ್ರ ಬರೆಯಲು ಛಾಪಾಕಾಗದವನ್ನು ನನ್ನ ತಮ್ಮ ತಂದಿರುತ್ತಾನೆ. ಸದರಿ ಪತ್ರವನ್ನು ಈರಣ್ಣನ ಗುಡಿಯ ಮುಂದೆ ಪ್ರತಿವಾದಿ ಹೇಳಿ ಬರೆಯಿಸಿರುತ್ತಾನೆ. ಸದರಿ ಪತ್ರವನ್ನು ಮಧ್ಯಾಹ್ನ 1.30 ರಿಂದ 2.30 ವೆರೆಗೆ ಬರೆದಿರುತ್ತಾನೆ. ಛಾಪಾಕಾಗದವನ್ನು ತಂದಾಗ ಎಷ್ಟುಗಂಟೆಯಾಗಿರುತ್ತದೆ ಅಂತ ನನಗೆ ಗೋತ್ತಿರುವುದಿಲ್ಲ, ಅದನ್ನು ನನ್ನ ತಮ್ಮ ತಂದಿರುತ್ತಾರೆ. ಒಪ್ಪಿಗೆ ಪತ್ರ ಬರೆಸುವಾಗ ಶೆಡಕಪ್ಪ, ಬಸವರಾಜಪ್ಪ ಮತ್ತು ಬಸವರಾಜಪ್ಪ ಇರುತ್ತಾರೆ. ಬಸವರಾಜಪ್ಪ ತಮ್ಮನ ಮಗ ಇರುತ್ತಾನೆ. ಶೆಡಕಪ್ಪ ಕುಸಲ್ಧನಿರುತ್ತಾನೆ. ಸದರಿಯವರು ಎಲ್ಲಾರು ನನಗೆ ಆತ್ಮಿಯರಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಬಸವರಾಜಪ್ಪ ನನ್ನ ತಮ್ಮನ ಮಗ ಇರುತ್ತಾನೆ ಎಂದು ನುಡಿಯುತ್ತಾರೆ. ನಾನು ಏನೆ ವ್ಯವಹಾರ ಮಾಡಿದರೂ ನಾವು ಮೂವರು ಸೇರಿ ಮಾಡುತ್ತೇವೆ ಎಂದರೆ ಸರಿಯಲ್ಲ. ದಿಃ 31-05-2011 ರಲ್ಲಿ ಒಪ್ಪಿಗೆ ಪತ್ರ ಮಾಡಲಾಗಿರುತ್ತದೆ. ಸದರಿ ಒಪ್ಪಿಗೆ ಪತ್ರದಲ್ಲಿ ನಾನು ಪ್ರತಿವಾದಿಯಿಂದ ಪಡೆದುಕೊಂಡ ಹಣಕ್ಕೆ ಬಡ್ಡಿ ಇರುವುದಿಲ್ಲ, ನ್ನನ ಹೊಲ ಬೆಳೆದುಕ್ಕೊಲು ಪ್ರತಿವಾದಿ ದುಡ್ಡು ಕೊಡುವಂತಿಲ್ಲ, ಸದರಿ ಹಣವನ್ನು ಮೂರು ತಿಂಗಳ ಒಳಗಾಗಿ ಕೊಡುವಂತೆ ಒಪ್ಪಿಗೆ ಪತ್ರವಾಗಿರುತ್ತದೆ. ನಾನು ನನ್ನ ತಮ್ಮನಿಗೆ ಮೂರು ತಿಂಗಳ ಒಳಗಡೆ ಹಣ ಕೇಳಿರುತ್ತೇನೆ, ಆತನು ಇಂದು-ಅಥವಾ ನಾಳೆ ಅಂತ ಮುಂದೂಡುತ್ತಾ ಬಂದಿರುತ್ತಾನೆ. ಆ ಬಗ್ಗೆ ನಾನು ಪ್ರತಿವಾದಿಗೆ ನಾನು ನೋಟಿಸು ಕೊಟ್ಟಿರುವುದಿಲ್ಲ. ಮೂರು ತಿಂಗಳೊಳಗೆ ಹಣ ತೆಗೆದುಕೊಂಡು ಹೊಲ ಬಿಟ್ಟುಬಿಡು ಅಂತ ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀಸವಾಲಿಗಾಗಿ ಪ್ರತಿವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**